# ಬಿ.ಎಸ್.ಎನ್.ಎಲ್.ನೌಕರರ ಹೌಸಿಂಗ್ ಸಹಕಾರ ಸಂಘ (ನಿ)

**ಹೊಸ ನಂ. ಎಫ್–3/9, 2ನೇ ಕ್ರಾಸ್, ಶಂಕರಮಠದ ರಸ್ತೆ, ಫೋರ್ಟ್ ಮೊಹಲ್ಲಾ ಮೈಸೂರು–570 004**

---

## 2022–2023 ನೇ ಸಾಲಿನ ಮಹಾಸಭೆಯ ನಡವಳಿಕೆಗಳು

ದಿನಾಂಕ : 03/09/2023ರ ಭಾನುವಾರ ಬೆಳಿಗ್ಗೆ 11 ಗಂಟೆಗೆ "ಶ್ರೀ ನಟರಾಜ ಪ್ರಾರ್ಥನಾ ಮಂದಿರ" (ಸಭಾ ಭವನ), ಫೋರ್ಟ್ ಮೊಹಲ್ಲಾ ಮೈಸೂರು–570 004 ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ನಡೆಸಿದ 2022–2023ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳು.

ಹಾಜರಿ:– ಸಭೆಗೆ 365 ಸದಸ್ಯರು ಹಾಜರಾಗಿದ್ದು ಹಾಜರಾತಿಯನ್ನು ಪ್ರತ್ಯೇಕವಾಗಿ ದಾಖಲಿಸಲಾಗಿದೆ.

| ಕ್ರ ಸಂ | ವಿಷಯ | ತೀರ್ಮಾನ |
|---|---|---|
| 1 | ಪ್ರಾರ್ಥನೆ | ನಿರ್ದೇಶಕರಾದ ಶ್ರೀಮತಿ.ವಿ.ಶಶಿಕಲ ರವರಿಂದ ದೇವತಾ ಪ್ರಾರ್ಥನೆಯಾಯಿತು. |
| 2 | ಸ್ವಾಗತ | ಸಂಘದ ನಿರ್ದೇಶಕರಾದ ಶ್ರೀ.ಮುರಳಿರವರು 2022–23ನೇ ಸಾಲಿನ ವಾರ್ಷಿಕ ಮಹಾಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳಿಗೆ ಹಾಗೂ ವೇದಿಕೆ ಮೇಲೆ ಆಸೀನರಾಗಿರುವ ಸಭಾಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್‌ರವರಿಗೆ, ಉಪಾಧ್ಯಕ್ಷರಾದ ಶ್ರೀ .ವಿ.ನಾಗೇಶ್‌ರವರಿಗೆ ಮತ್ತು ನಿರ್ದೇಶಕರುಗಳಿಗೆ ಸಂಘದ ಆಡಳಿತ ಮಂಡಳಿ ಪರವಾಗಿ ಸ್ವಾಗತ ಕೋರಿ. ಮಹಾಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ರಚನಾತ್ಮಕ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಸದಸ್ಯರಲ್ಲಿ ಮನವಿ ಮಾಡಿದರು. |
| 3 | ನಿಧನ ಹೊಂದಿದವರಿಗೆ ಸಂತಾಪ ಸೂಚನೆ:– | ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು 2022–2023ನೇ ಸಾಲಿನಲ್ಲಿ ನಿಧನ ಹೊಂದಿರುವ ಸಂಘದ ಸದಸ್ಯರಾದ ಶ್ರೀ.ಜಿ.ಮೋಹನ್ ರಾವ್, ಶ್ರೀ.ಲಕ್ಷ್ಮಣ್ ರಾವ್. ಶ್ರೀ.ರಮೇಶ್ ಬಾಬು ಶ್ರೀ.ಮತಿ. ಗೀತಾ ಬಾಯಿ, ಶ್ರೀ.ರಾಜರಾವ್, ಶ್ರೀ.ಹೆಚ್.ಶಂಕರ್ ರವರಿಗೆ ಮತ್ತು ಸಂಘದ ಗಮನಕ್ಕೆ ಬಾರದೆಯಿರುವ ಸದಸ್ಯರ ಹೆಸರು ತಪ್ಪಿದ್ದಲ್ಲಿ ಅವರಿಗೂ ಸಭೆಯಲ್ಲಿ ಒಂದು ನಿಮಿಷ ಮೌನ ಆಚರಿಸಿ ಸಂತಾಪ ಸೂಚಿಸಿದರು. |
| 4 | ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು | ವಾರ್ಷಿಕ ಮಹಾಸಭೆಯ ಬಗ್ಗೆ ಸದಸ್ಯರಿಗೆ ಸಂಘವು ನೀಡಲಾದ ಸೂಚನಾ ಪತ್ರವನ್ನು ನಿರ್ದೇಶಕರಾದ ಶ್ರೀ ಎ.ಸುರೇಶ್‌ರವರು ಸಭೆಯಲ್ಲಿ ಓದಿ ಸಭೆಯ ಅನುಮೋದನೆ ಕೋರಿದರು.<br><br>ಸದಸ್ಯರಾದ ಶ್ರೀ.ಬಿ.ಟಿ.ರಾಮಚಂದ್ರರವರು ಅಧ್ಯಕ್ಷರೆ,ಸಂಘದ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಕಳುಹಿಸುವ ಜೊತೆಯಲ್ಲೇ ವಾರ್ಷಿಕ ಮಹಾಸಭೆಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಕಳುಹಿಬೇಕು, ಅದು ನಿಮ್ಮ ಸಂಘದ ಆದ್ಯ ಕರ್ತವ್ಯವೆಂದು, ಹಿಂದಿನ ಸಾಲಿನ ಸಭೆಯಲ್ಲಿಯೇ ಚರ್ಚಿಸಲಾಗಿತ್ತು. ಇಲ್ಲವೇ ಎಲ್ಲಾ ಮಾಹಿತಿಯನ್ನು ಮಹಾಸಭೆಯಲ್ಲೇ ಪ್ರೊಜೆಕ್ಟರ್ ಮೂಲಕ ಪ್ರದರ್ಶಿಸಬೇಕು. ಮುಂದಿನ ಸಾಲಿನ ಸಭೆಗೆ ಕಡ್ಡಾಯವಾಗಿ ಪ್ರತಿ ಸದಸ್ಯರಿಗೆ ಎಲ್ಲಾ ಮಾಹಿತಿಗಳನ್ನು ಕಳುಹಿಸಲೇಬೇಕು ಅದು ನಿಮ್ಮ ಕರ್ತವ್ಯ ಮತ್ತು ಸೂಚನಾ ಪತ್ರದಲ್ಲಿ 1) ಪ್ರಾರ್ಥನೆ 2) ಸ್ವಾಗತ. 3)ನಿಧನ ಹೊಂದಿದವರಿಗೆ ಸಂತಾಪ ಸೂಚನೆ.ಎಂದು ನಮೂದಿಸಿರುವಂತೆ ಎಲ್ಲವೂ ಸರಿ ಆದರೆ ನಿಮ್ಮ ಕಾರ್ಯಕಾರಿ ಮಂಡಳಿಯ ನಿರ್ದೇಶಕರನ್ನು ಪರಿಚಯಿಸುವ ಬಗ್ಗೆ ತಮ್ಮ ಕಾರ್ಯಸೂಚಿಪಟ್ಟಿಯಲ್ಲಿ ನಮೂದಿಸಬೇಕು. ಹಾಗೂ ಸಂಘದಲ್ಲಿ 2022–2023ನೇ ಸಾಲಿನಲ್ಲಿ ಯಾವ ಚಟುವಟಿಕೆಗಳು |

| | | |
|---|---|---|
| | | ನಡೆದಿದೆ ಎಂದು ಮಾಹಿತಿ ಪುಸ್ತಕದಲ್ಲಿ ಬರೆಯಬೇಕೆಂದು ತಿಳಿಸಿದರು.<br><br>ಸದಸ್ಯರಾದ ಶ್ರೀ. ರಾಚಯ್ಯರವರು ಸಭಾಧ್ಯಕ್ಷರೇ ಎಲ್ಲಾ ಸಹಕಾರ ಸಂಘಗಳಲ್ಲಿಯು ಮಾಹಿತಿ ಪುಸ್ತಕಗಳನ್ನು ಸದಸ್ಯರಿಗೆ ಕಳುಹಿಸುವುದು ವಾಡಿಕೆ, ಹಾಗೆ ತಾವು ತಮ್ಮ ಸಂಘದಿಂದ ಸದಸ್ಯರಿಗೆ ಮಾಹಿತಿ ಪುಸ್ತಕಗಳನ್ನು ಕಳುಹಿಸಿ ಎಂದರು. ಶ್ರೀ. ರಾಚಯ್ಯರವರ ಹೇಳಿಕೆಗೆ ಶ್ರೀ ಡಿ.ರತನ್ ಕುಮಾರ್ ರವರು ಧ್ವನಿಸೇರಿಸುತ್ತ ಹೌದು ಎಲ್ಲಾ ಸದಸ್ಯರಿಗು ಮಾಹಿತಿ ಪುಸ್ತಕಗಳನ್ನು ಕಳುಹಿಸಲೇಬೇಕು ಎಂದು ಸಭೆಗೆ ತಿಳಿಸಿದರು.<br><br>ಸಭಾಧ್ಯಕ್ಷರಾದ ಶ್ರೀ.ಎನ್.ಡಿ.ಸುಂದರ್ ರವರು ಪ್ರತಿಕ್ರಿಯಿಸುತ್ತಾ, ವಾರ್ಷಿಕ ಮಹಾಸಭೆಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಂಘದ ವೆಬ್–ಸೈಟ್ **www.mysurubsnlehcs.co.in** ನಲ್ಲಿ ಪಡೆಯಬಹುದಾಗಿರುತ್ತದೆ, ಎಂದು ಸೂಚನಾ ಪತ್ರದಲ್ಲಿ ತಿಳಿಸಲಾಗಿದೆ. ಪುಸ್ತಕಸಮೇತವಾಗಿ ಪ್ರತಿ ಸದಸ್ಯರಿಗೂ ಕಳುಹಿಸಬೇಕು ಎಂದಾದರೇ ರಿಜಿಸ್ಟರ್ ಪೋಸ್ಟ್ ಮುಖಾಂತರ ಕಳುಹಿಸಬೇಕಾಗುತ್ತದೆ. ಆದರೆ ಎಲ್ಲ ಸದಸ್ಯರಿಗೂ ಈ ಪುಸ್ತಕಗಳು ಸರಿಯಾಗಿ ತಲುಪದೇ ಸಂಘಕ್ಕೆ ವಾಪಸ್ ಆಗಿರುವ ಉದಾಹರಣೆಗಳೇ ಹೆಚ್ಚು. ಪ್ರಸ್ತುತ ಸಂಘವು ಲಾಭದಲ್ಲಿ ಇರುತ್ತದೆ ಆದರೆ ಮುಂದಿನ ಸಾಲುಗಳಲ್ಲಿಯೂ ಲಾಭದಲ್ಲಿರುತ್ತದೆ ಎಂದು ಹೇಳಲಾಗಿವುದಿಲ್ಲ, ಆದ ಕಾರಣ ಖರ್ಚುಗಳನ್ನು ಕಡಿಮೆ ಮಾಡಲು ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಮತ್ತು ಕಾರ್ಯಕಾರಿ ಮಂಡಳಿಯ ನಿರ್ದೇಶಕರನ್ನು ಪರಿಚಯಿಸುವ ಬಗ್ಗೆ, ಸಂಘದ ಚುನಾವಣೆ ನಡೆದ ಸಾಲಿನಲ್ಲೇ ಪ್ರತಿ ನಿರ್ದೇಶಕರನ್ನು ವಿವರವಾಗಿ ಪರಿಚಯಿಸಲಾಗಿದೆ ಹಾಗೂ ಪ್ರತಿ ಸಾಲಿನ ಆಡಳಿತ ವರದಿಲ್ಲಿಯೂ ಅಧ್ಯಕ್ಷರು,ಉಪಾಧ್ಯಕ್ಷರು ಮತ್ತು ನಿರ್ದೇಶಕರ ಹೆಸರಿನ ಸಮೇತ ಉಲ್ಲೇಖಿಸಲಾಗಿದೆ ಮತ್ತು ಸಂಘದ ಎಲ್ಲ ಚಟುವಟಿಕೆಗಳನ್ನು ಸಂಘದ ಆಡಳಿತ ವರದಿಯಲ್ಲಿ ನಮೂದಿಸಲಾಗಿದೆ ಎಂದು ತಿಳಿಸಿದರು.<br><br>ಸಭಾಧ್ಯಕ್ಷರ ಉತ್ತರವನ್ನು ಆಲಿಸಿ ಸದಸ್ಯರಾದ ಶ್ರೀ.ಬಿ.ಟಿ.ರಾಮಚಂದ್ರರವರು ಅಧ್ಯಕ್ಷರೇ ತಾವು ಅಂಚೆ ಇಲಾಖೆಯನ್ನೇ ಅನುಮಾನಿಸುತಿದ್ದೀರಿ ಎಂದೆನಿಸುತ್ತಿದೆ.ಹಾಗೆ ವಾಪಸ್ ಆದಂತ ಪುಸ್ತಕಗಳನ್ನು ವಾರ್ಷಿಕ ಮಹಾಸಭೆಯಲ್ಲಿ ಇಡೀ ಸದಸ್ಯರು ಸಭೆಯಲ್ಲಿ ಪಡೆಯುತ್ತಾರೆ ಎಂದರು.<br><br>ಸದಸ್ಯರಾದ ಶ್ರೀ.ಎಂ.ಎನ್.ರಾಮಕೃಷ್ಣ ರವರು ಮಾಹಿತಿ ಪುಸ್ತಕಕ್ಕೆ ಸಂಬಂಧಿಸಿದ ಎಲ್ಲಾ ಚರ್ಚೆಗಳನ್ನು ಆಲಿಸಿ,ಅಧ್ಯಕ್ಷರೇ ಈ ವಿಷಯಕ್ಕೆ ಸಂಬಂಧಿಸಿದಂತೆ ಬಹಳ ಹಿಂದೆಯೇ ಸಂಘಕ್ಕೆ ಹೊರೆಯಾಗುವ ಕಾರಣದಿಂದ ಸೂಚನ ಪತ್ರದ ಜೊತೆಗೆ ಪುಸ್ತಕವನ್ನು ಕಳುಹಿಸುವುದು ಬೇಡ ಎಂದು ಮಹಾಸಭೆಯಲ್ಲೇ ತೀರ್ಮಾನವಾಗಿದೆ ಅಂಚೇ,ವಾಟ್ಸಾಪ್,ವೆಬ್‌ಸೈಟ್ ಮುಖಾಂತರ ಕಳಿಸಲಾಗಿರುತ್ತದೆ. ಅಂದಮೇಲೆ ಈ ವಿಷಯದ ಬಗ್ಗೆ ಇಷ್ಟೊಂದು ಸಮಯ ವ್ಯರ್ಥಮಾಡುವ ಅಗತ್ಯವಿಲ್ಲ ಎಂದು ತಿಳಿಸಿದರು.<br><br>ಸಭೆಯ ಸರ್ವಾನುಮತದ ಒಪ್ಪಿಗೆ ಮೇರಿಗೆ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ದಾಖಲು ಮಾಡಲಾಯಿತು. |
| 5. | ದಿನಾಂಕ:18/09/2022ರ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು | ಸಂಘದ ನಿರ್ದೇಶಕರಾದ ಶ್ರೀ ಜಿ.ಶೇಖರಮೂರ್ತಿಯವರು ರವರು ದಿನಾಂಕ:– 18/09/2022ರಂದು ನಡೆದ 2021–2022ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಸಭೆಯಲ್ಲಿ ಓದಿ ಸಭೆಯ ಅನುಮೋದನೆ ಕೋರಿದರು.<br><br>ಸದಸ್ಯರಾದ ಶ್ರೀ.ಡಿ.ರತನ್ ಕುಮಾರ್ ರವರು ಅಧ್ಯಕ್ಷರೇ ನಾನು ಹಿಂದಿನ ಸಾಲಿನಲ್ಲಿ ಕೇಳಲಾದ ಪ್ರಶ್ನೆಯು ತಪ್ಪಾಗಿ ದಾಖಲಾಗಿದೆ, ನಾನು ಕೇಳಲಾದ ಪ್ರಶ್ನೆ 40 x 60 ಆಳತೆಯ ನೀವೇಶನಕ್ಕೆ ನಿರಾಕ್ಷೇಪಣಾ ಪತ್ರವನ್ನು ನೀಡಲು ಎರಡು ಲಕ್ಷ ರಾಪಾಯಿಗಳನ್ನು ಪಡೆದಿದ್ದೀರಿ ಯಾವ ಮಾನದಂಡದ ಆಧಾರದ ಮೇಲೆ ನೀಡುತ್ತಿದ್ದೀರಿ ಎಂದು ಕೇಳಲಾದ ಪ್ರಶ್ನೆಗೆ ಬದಲಾಗಿ ಬೇರೆ |

| | | |
|---|---|---|
| | | ವಿಷಯ ದಾಖಲಾಗಿದೆ ,ಈ ಹಿಂದೆಯೇ ಬಹಳಷ್ಟು ಬಾರಿ ಟೈಪಿಂಗ್ ನಲ್ಲಿ ಶಾರ್ಟ್ ಹ್ಯಾಂಡ್ ಆದವರನ್ನು ನೇಮಿಸಿಕೊಳ್ಳಿ ಎಂದು ತಿಳಿಸಿದ್ದರೂ ಸಹ ಮತ್ತೆ ಅದೇ ಪದ್ಧತಿ ಮುಂದುವರೆಯುತ್ತಿದೆ ಎಂದರು,<br><br>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ 2020–2021ನೇ ಸಾಲಿನ ಮಹಾಸಭೆಯಲ್ಲಿ ನಿರಾಕ್ಷೇಪಣಾ ಪತ್ರದ ಬಗ್ಗೆ ಉಲ್ಲೇಖಿಸಲಾಗಿದೆ ಎಂದು ತಿಳಿಸುತ್ತ ಶಾರ್ಟ್ ಹ್ಯಾಂಡ್ ಆದವರನ್ನು ನೇಮಿಸಿಕೊಳ್ಳುವ ಬಗ್ಗೆ, ಇತ್ತೀಚಿನ ದಿನಗಳಲ್ಲಿ ಶಾರ್ಟ್ ಹ್ಯಾಂಡ್ ಆಗಿರುವವರ ಲಭ್ಯತೆ ಕಡಿಮೆ ಮತ್ತು ಸಂಘದ ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಕ್ರಮವಿಡುವುದು ಎಂದು ತಿಳಿಸಿದರು.<br><br>ಸಭೆಯು ಸರ್ವಾನುಮತದ ಒಪ್ಪಿಗೆ ಮೇರೆಗೆ 2021–22ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ದಾಖಲು ಮಾಡಲಾಯಿತು. |
| 6 | ಸಂಘದ 2022–23 ನೇ ಸಾಲಿನ ಆಡಳಿತ ವರದಿ | ಸಂಘದ 2022–23ನೇ ಸಾಲಿನ ಆಡಳಿತ ವರದಿಯನ್ನು ನಿರ್ದೇಶಕರಾದ ಶ್ರೀಮತಿ.ವಿ.ಶಶಿಕಲ ರವರು ಸಭೆಯಲ್ಲಿ, ಮಂಡಿಸಿ ಸಭೆಯ ಅನುಮೋದನೆ ಕೋರಿದರು.<br><br>ಸದಸ್ಯರಾದ ಶ್ರೀ.ಬಿ.ಟಿ.ರಾಮಚಂದ್ರ ರವರು ಆಡಳಿತ ವರದಿಗೆ ನನ್ನ ಅನುಮೋದನೆ ಇರುವುದಿಲ್ಲ ಎಂದು ಪ್ರತಿಕ್ರಿಯಿಸುತ್ತಾ, 2022–23 ನೇ ಸಾಲಿನ ಆಡಳಿತ ವರದಿಯಲ್ಲಿ ಮುಕ್ತಾಯಗೊಂಡಿರುವ 1ನೇ ಹಂತ:– ಯಾವುದೇ ಚಟುವಟಿಕೆ ಇರುವುದಿಲ್ಲ,ಮುಕ್ತಾಯಗೊಂಡಿರುವ 2ನೇ ಹಂತ:– ಯಾವುದೇ ಚಟುವಟಿಕೆ ಇರುವುದಿಲ್ಲ ಆದರೆ ತಾವು ಯಾತಕ್ಕಾಗಿ ಮುಕ್ತಾಯಗೊಂಡಿರುವ 3ನೇ ಹಂತ:– ಅಭಿವೃದ್ದಿ ಚಟುವಟಿಕೆ ಇರುವುದಿಲ್ಲ. ಎಂದು ನಮೂದಿಸಿದ್ದೀರಿ, ಸಂಘವು 3ನೇ ಹಂತದ ಎಲ್ಲ ಮೂಲಭೂತ ಸೌಕರ್ಯಗಳನ್ನು ನಿಲ್ಲಿಸಿದ್ದು, ಬಡಾವಣೆಯ ಸದಸ್ಯರಿಗೆ ಬಹಳ ತೊಂದರೆ ಉಂಟಾಗಿದೆ, ಸಂಘವು ಬಡಾವಣೆಯನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ಎಲ್ಲಾ ಮೂಲಭೂತ ಸೌಕಾರ್ಯಗಳ ನಿರ್ವಹಣೆಯನ್ನು ನಿಲ್ಲಿಸಬೇಕು ಅಥವಾ ನಿರ್ವಹಣೆಯನ್ನು ಮುಂದುವರಿಸಬೇಕು ಅದನ್ನು ಬಿಟ್ಟು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡದಿದ್ದಲ್ಲಿ ಬಡಾವಣೆಯ ಜನಗಳು ಹೇಗೆ ಜೀವನ ನಡೆಸಬೇಕು? ಎಂದು ಪ್ರಶ್ನಿಸಿದರು ಸರಿಯಾದ ವಿದ್ಯುತ್ ದೀಪಗಳು ಇಲ್ಲ ,ಒಳಚರಂಡಿ ಇಲ್ಲ, ನೀರಿನ ಸೌಲಭ್ಯವಿಲ್ಲ ಹೇಗೆ ಜೀವನ ನಡೆಸುವುದು ಎಂದು ತಿಳಿಸಿದರು.<br><br>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ಹಿಂದಿನ ವಾರ್ಷಿಕ ಮಹಾಸಭೆಯಲ್ಲಿ 3ನೇ ಹಂತದಿಂದ ಬರುವ ಆದಾಯಗಳಲ್ಲಿ ಮಾತ್ರ 3ನೇ ಹಂತದ ಖರ್ಚುಗಳನ್ನು ಭರಿಸಬೇಕು ಎಂದು ಸಭೆಯು ತೀರ್ಮಾನಿಸಿರುವುದರಿಂದ, ಸಂಘವು ಯಾವುದೇ ನಿರ್ವಹಣೆ ಮಾಡಲಾಗುವುದಿಲ್ಲವೆಂದು ತೀರ್ಮಾನಿಸಿದರು ಈ ವರ್ಷವೂ ಮಾನವೀಯ ದೃಷ್ಟಿಯಿಂದ ಹೆಚ್ಚುವರಿ ಮೊತ್ತವನ್ನು ಸಂಘವೇ ಖರ್ಚು ಮಾಡಿರುತ್ತದೆ.<br><br>ಸದಸ್ಯರಾದ ಶ್ರೀ.ಶ್ರೀನಿವಾಸ್ ರವರು ತಮ್ಮ ಆಡಳಿತ ವರದಿಯಲ್ಲಿ ಎಷ್ಟು ಜನಕ್ಕೆ ನಿವೇಶನ ಹಂಚಿಕೆಯಾಗಿದೆ ಎಷ್ಟು ನಿವೇಶನಗಳು ಬಾಕಿ ಇದೆ ಎಷ್ಟು ನಿವೇಶನ ಆಕಾಂಕ್ಷಿಗಳು ಹಣ ಪಾವತಿಸದೆ ಉಳಿದಿದ್ದಾರೆ ಎಂಬುವ ವಿವರವನ್ನು ನಮೂದಿಸಬೇಕಾಗಿತ್ತು<br><br>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ಸಂಘವು ನಿಗದಿಪಡಿಸಿದ ದಿನಾಂಕದೊಳಗೆ ಯಾರು ಹಣ ಪಾವತಿಸಿ,ಜೇಷ್ಠತೆಯನ್ನು ಹೊಂದಿದ್ದಾರೋ ಆ ಎಲ್ಲಾ ಸದಸ್ಯರಿಗು ಅವರ ಅವರ ಜೇಷ್ಠತೆಯ ಆಧಾರದ ಮೇಲೆ ನಿವೇಶನವನ್ನು ಮಂಜೂರು ಮಾಡಲಾಗಿದೆ ಹೆಚ್ಚಿನ ಮಾಹಿತಿಗಾಗಿ ಸಂಘಕ್ಕೆ ಭೇಟಿ ನೀಡಿ ಎಂದು ತಿಳಿಸಿದರು.<br><br>ಸಭೆಯು ಸಂಘದ ಆಡಳಿತ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು. |

| | | |
|---|---|---|
| 7 | ಸಂಘದ 2022–23ನೇ ಸಾಲಿನ ಆಡಿಟ್ ಆದ ಲೆಕ್ಕ ತಃಖ್ತೆಗಳು ಮಂಡನೆ ಹಾಗೂ ಅಂಗೀಕಾರ | ಸಂಘದ 2022–23ನೇ ಸಾಲಿನ ಆಡಿಟ್ ಆದ ಜಮಾ-ಖರ್ಚು, ಲಾಭ-ನಷ್ಟ, ಆಸ್ತಿ ಜವಾಬ್ದಾರಿ ಲೆಕ್ಕ ತಃಖ್ತೆಗಳು ಹಾಗೂ ವರದಿಯನ್ನು ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್‌ರವರು ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು.ಹಾಗೂ ಲೆಕ್ಕಪರಿಶೋಧಕರ ಸಲಹೆಯಂತೆ2022–2023ನೇ ಸಾಲಿನಲ್ಲಿ ಕುನ್ನಯನವರಿಂದ ಅಭಿವೃದ್ದಿ ಮುಂಗಡದ ಬಾಬ್ತು ರೂ–943771–18 ಬರಲು ಬಾಕಿ ಇದ್ದು ಸದರಿ ಮುಂಗಡ ಬಾಕಿ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.ಕುನ್ನಯನವರು ಮರಣಹೊಂದಿರುವ ಕಾರಣ ಪ್ರತಿ ಸಾಲಿನ ಆಡಿಟ್ ಆದ ಲೆಕ್ಕ ತಃಖ್ತೆಗಳಲ್ಲಿ ಮುಂದುವರೇಯುತ್ತಿದೆ ಆದ ಕಾರಣ ಈ ವಿಷಯವನ್ನು ಕೈಬಿಡಲು ಮಹಾ ಸಭೆಯ ಅನುಮೊದನೆ ಕೋರುತ್ತಿವೆ. |

ಸದಸ್ಯರಾದ ಶ್ರೀ. ಬಿ.ಟಿ.ರಾಮಚಂದ್ರ ರವರು ಆಡಿಟ್ ಆದ ಲೆಕ್ಕ ತಃಖ್ತೆಗಳಲ್ಲಿ ಜಮಾ ಸಾಲಿನಲ್ಲಿ ಕ್ರಮ ಸಂಖ್ಯೆ 7).ಆದಾಯ ಬಾಬ್ತುಗಳಿಂದ:–3ನೇ ಹಂತದ ಬೆಟರ್‌ಮೆಂಟ್ ಲೆವಿ –5,35,504ರೂಗಳು ಮತ್ತು ಖರ್ಚು ಸಾಲಿನಲ್ಲಿ ಕ್ರಮ ಸಂಖ್ಯೆ 7).ಆಡಳಿತಾತ್ಮಕ ವೆಚ್ಚಗಳಲ್ಲಿ :3ನೇ ಹಂತದ ನಿರ್ವಹಣಾ ವೆಚ್ಚ–1,24,409 ಹಾಗೂ 3ನೇ ಹಂತದ ವಿದ್ಯುತ್ ಶುಲ್ಕ–3,03,832 ಎಂದು ನಮೂದಿಸಿದ್ದೀರಿ ಆ ಲೆಕ್ಕದ ವಿವರವನ್ನು ಸಭೆಗೆ ತಿಳಿಸಿ ಎಂದು ಕೇಳಿದರು.

ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ಸಂಘಕ್ಕೆ 2022–2023ನೇ ಸಾಲಿನಲ್ಲಿ ಬಂದಿರುವ ನಿರಕ್ಷೇಪಣಾ ಪತ್ರದ ವಿವರ ಹಾಗೂ ಸಂಘವು 3ನೇ ಹಂತದ ಬಡಾವಣೆಗೆ ಪಾವತಿಸಿರುವ ವಿದ್ಯುತ್ ಶುಲ್ಕ ಮತ್ತು 3ನೇ ಹಂತದ ಬಡಾವಣೆಯಲ್ಲಿ ನಿವೇಶನಗಳನ್ನು ಸ್ವಚ್ಛಗೊಳಿಸಿದು ಮತ್ತು ಒಳಚರಂಡಿ ರಿಪೇರಿ ವೆಚ್ಚದ ವಿವರವನ್ನು ಸಭೆಗೆ ಓದಿ ತಿಳಿಸಿದರು.

| 3ನೇ ಹಂತದ ನಿರ್ವಹಣಾ ವೆಚ್ಚ | | |
|---|---|---|
| ಖಐ ಓಔ: | ವಿವರಗಳು( ಆದಾಯ) | ಮೊತ್ತ |
| 1 | 3ನೇ ಹಂತದ ನಿರಾಕ್ಷೇಪಣಾ ಪತ್ರ | 5,20,501 |
| 2 | 3ನೇ ಹಂತದ ಬೆಟರ್‌ಮೆಂಟ್ ಲೆವಿ Road cutting charges | 15,000 |
| | ಒಟ್ಟು ಮೊತ್ತ | 5,35,501 |
| | | |
| ಖಐ ಓಔ: | ವಿವರಗಳು (ವೆಚ್ಚ) | ಮೊತ್ತ |
| 1 | ವಿದ್ಯುತ್ ಶುಲ್ಕ | 3,03,832 |
| 2 | 3ನೇ ಹಂತದ ಒಳಚರಂಡಿ ಸ್ವಚ್ಛಗೊಳಿಸಿದ ವೆಚ್ಚ(Block No15 site no:9) ಮತ್ತು ಬಡಾವಣೆ ಸ್ವಚ್ಛಗೊಳಿಸಿದ ವೆಚ್ಚ | 1,24,409 |
| | ಒಟ್ಟು ಮೊತ್ತ | 4,28,241 |

ಸದಸ್ಯರಾದ ಶ್ರೀ ಬಿ.ಟಿ.ರಾಮಚಂದ್ರ ರವರು ಕಳೆದ ಸಾಲಿನಲ್ಲಿ ಬಹಳಷ್ಟು ವಿದ್ಯುತ್ ಶುಲ್ಕವನ್ನು ನಾವೇ ಪಾವತಿಸಿಕೊಂಡಿದ್ದೇವೆ ಯಾವ ಒಳಚರಂಡಿಯು ಸ್ವಚ್ಛವಾಗಿಲ್ಲ ಎಂದು ತಿಳಿಸಿದರು.
ಸಭಾಧ್ಯಕ್ಷರು ಶ್ರೀ ಬಿ.ಟಿ.ರಾಮಚಂದ್ರ ರವರೇ ನಿಮಗೆ ಬಡಾವಣೆಯಲ್ಲಿ ನಡೆದ ವಿಷಯಗಳ ಬಗ್ಗೆ ಮಾಹಿತಿ ಇಲ್ಲವೆನಿಸುತ್ತದೆ,3ನೇ ಹಂತದಲ್ಲಿ ವಾಸವಿರುವ ಶ್ರೀ.ಕೆ.ಸೋಮಶೇಖರ್ ರವರ ಮನೆಯ ಹತ್ತಿರ ಇರುವ ಒಳಚರಂಡಿ ಸ್ವಚ್ಛಗೊಳಿಸಲಾಗಿದೆ ಆ ಹಣವನ್ನು ಸಂಘ ಪಾವತಿಸಿರುತ್ತದೆ. ಸದಸ್ಯರಾದ ಶ್ರೀ.ಕೆ.ಸೋಮಶೇಖರ್ ರವರವರು ಇದೆ ಸಭೆಯಲ್ಲಿದ್ದರೆ ತಾವು ಕೇಳಿ

| | | |
|---|---|---|
| | | ಮಾಹಿತಿಯನ್ನು ಪಡೆಯಬುದು ಎಂದರು.<br><br>ಸದಸ್ಯರಾದ ಶ್ರೀ.ಕೆ.ಸೋಮಶೇಖರ್ ರವರವರು ಒಳಚರಂಡಿ ಸ್ವಚ್ಛಗೂಳಿಸಲಾಗಿದೆ ಆ ಹಣವನ್ನು ನಾನು ಪಾವತಿಸಿಲ್ಲ ಸಂಘದಿಂದಲೇ ಹಣವನ್ನು .ಪಾವತಿಮಾಡಲಾಗಿದೆ ಎಂದುತಿಳಿಸಿದರು.<br><br>ಸಭಾಧ್ಯಕ್ಷರು ಶ್ರೀ ಬಿ.ಟಿ.ರಾಮಚಂದ್ರ ರವರು ಸಭೆಯನ್ನು ತಪ್ಪುದಾರಿಗೆ ಎಳಿಯುತ್ತಿದಾರೆ ಎಂದು ಸಭೆಗೆ ತಿಳಿಸುತ್ತ ಇತರಹದ ಸುಳ್ಳು ತಪ್ಪು ಮಾಹಿತಿಗಳನ್ನು ಸಭೆಗೆ ನೀಡುವುದನ್ನು ನಿಲ್ಲಿಸಬೇಕೆಂದು ಸೂಚಿಸಿದರು.<br><br>**2022-2023ನೇ ಸಾಲಿನಲ್ಲಿ ಕುನ್ನಯನವರಿಂದ ಅಭಿವೃದ್ಧಿ ಮುಂಗಡದ ಬಾಬ್ತು ರೂ-943771-18/- ಬರಲು ಬಾಕಿ ಇದ್ದು ಸದರಿ ಮುಂಗಡ ಬಾಕಿ ಬಗ್ಗೆ ಯಾವುದೇ ಮಾಹಿತಿ ಹಾಜರುಪಡಿಸಿರುವುದಿಲ್ಲ ಈ ಬಗ್ಗೆ ವಿವರಗಳನ್ನು ಪಡೆದು ವಸೂಲಿ ಮಾಡಲು ಕ್ರಮವಿಡಲಾಗುವುದು ಸಾಧ್ಯವಾಗದಿದಲ್ಲಿ ಲೆಕ್ಕಪರಿಶೋಧಕರ ಸಲಹೆಯಂತೆ ಕ್ರಮವಿಡುವುದು ಎಂದು ತೀರ್ಮಾನಿಸಿದರು.**<br><br>**ಸಂಘದ 2022-23ನೇ ಸಾಲಿನ ಆಡಿಟ್ ಆದ ಲೆಕ್ಕ ತಃಖ್ತೆಗಳನ್ನು ಮತ್ತು ಕುನ್ನಯನವರಿಂದ ಅಭಿವೃದ್ಧಿ ಮುಂಗಡದ ಬಾಬ್ತುಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು.** |
| **8** | **ಸಂಘದ 2022-23ನೇ ಸಾಲಿನ ಲಾಭ ವಿಲೇವಾರಿ** | **ಸಂಘವು 2022-23ನೇ ಸಾಲಿನಲ್ಲಿ ಗಳಿಸಿರುವ ನಿವ್ವಳ ಲಾಭ ರೂ.7,67,620.42/- ಗಳನ್ನು ಕೆಳಕಂಡಂತೆ ವಿಲೇವಾರಿ ಮಾಡಲು ಸಭೆಯ ಅನುಮೋದನೆಗಾಗಿ ನಿರ್ದೇಶಕರಾದ ಶ್ರೀ ಎ.ಸುರೇಶ್‌ರವರು ಸಭೆಯಲ್ಲಿ ಮಂಡಿಸಿದರು.** |

| | |
|---|---|
| ಅಪದ್ಧನ ನಿಧಿ, ಶೇಕಡ 25 | ರೂ.1,91,905 |
| ಸಹಕಾರ ವಿದ್ಯಾನಿಧಿ, ಶೇಕಡ 2 | ರೂ.11,514.30 |
| ಸದಸ್ಯರ ಷೇರಿನ ಮೇಲೆ ಲಾಭಾಂಶ ಶೇಕಡ 6 | ರೂ.34,542.92 |
| ನೌಕರರಿಗೆ ಬೋನಸ್ | ರೂ.23,000.00 |
| ಕಟ್ಟಡ ನಿಧಿ | ರೂ. 5,16,658.2 |

**ಸಂಘದ 2022-23ನೇ ಸಾಲಿನ ಲಾಭ ವಿಲೇವಾರಿಗೆ ಸಭೆಯು ತನ್ನ ಅನುಮೋದನೆ ನೀಡಿತು.**

| | | |
|---|---|---|
| **9** | **ಸಂಘದ 2023-24ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ** | **2023-24ನೇ ಸಾಲಿಗೆ ಅಂದಾಜು ಆಯ-ವ್ಯಯ ಪಟ್ಟಿಯನ್ನು ನಿರ್ದೇಶಕರಾದ ಶ್ರೀ ಎ.ಸುರೇಶ್‌ರವರು ಕೆಳಕಂಡಂತೆ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು.** |

| ಕ್ರಸಂ | ಅಂದಾಜು ಆದಾಯ | ರೂ. | ಅಂದಾಜು ವೆಚ್ಚ | ರೂ. |
|---|---|---|---|---|
| 1. | ಠೇವಣಿ ಮೇಲೆ ಬಡ್ಡಿ | 14,00,000.00 | *ಸಿಬ್ಬಂದಿ ವೆಚ್ಚ | 3,00,000.00 |
| | | | *ಬಾಡಿಗೆ | 1,90,000.00 |
| 2. | ಇತರೆ ಮೂಲಗಳಿಂದ | 4,00,000.00 | *ದೂರವಾಣಿ ವೆಚ್ಚ | 20,000.00 |
| | | | *ವಿದ್ಯುತ್ ವೆಚ್ಚ | 15,000.00 |
| | | | *ಅಂಚೆ ವೆಚ್ಚ | 25000.00 |
| | | | *ಮುದ್ರಣ ಲೇಖನಸಾಮಗ್ರಿ | 25,000.00 |
| | | | *ವಾರ್ಷಿಕ ಮಹಾಸಭೆ ವೆಚ್ಚ | 2,65,000.00 |
| | | | *ನಿವೇಶನದಾರರು ಸಭೆ ವೆಚ್ಚ | 3,00,000.00 |
| | | | *ನ್ಯಾಯವಾದಿಗಳ ಶುಲ್ಕ | 1,00,000.00 |
| | | | *ಪ್ರಯಾಣ ವೆಚ್ಚ | 50,000.00 |
| | | | *ಜಾಹೀರಾತು ವೆಚ್ಚ | 50,000.00 |
| | | | *ಇತರೆ | 2,50,000.00 |

<table>
<tr><td></td><td></td><td>
<table>
<tr><td></td><td></td><td></td><td>*ಅಂದಾಜು ಲಾಭ</td><td>2,10,000.00</td></tr>
<tr><td></td><td>ಜುಮ್ಲಾ ರೂ.</td><td>18,00,000.00</td><td>ಜುಮ್ಲಾ ರೂ.</td><td>18,00,000.00</td></tr>
</table>
ಸದಸ್ಯರಾದ ಶ್ರೀ ಬಿ.ಟಿ.ರಾಮಚಂದ್ರ ರವರು ಅಧ್ಯಕ್ಷರೇ 2022–23ನೇ ಸಾಲಿನ ಲಾಭ ವಿಲೇವಾರಿಯಲ್ಲಿ ನೌಕರರಿಗೆ ಬೋನಸ್ ರೂ.23,000.00 ಎಂದು ನಮೊದಿಸಿದಿರಿ ಆದರೆ 2021–22ನೇ ಸಾಲಿನ ಲಾಭ ವಿಲೇವಾರಿಯಲ್ಲಿ, ನೌಕರರಿಗೆ ಬೋನಸ್ ರೂ–12000/– ಎಂದು ನಮೋದಿಸಲಾಗಿದೆ ಇದರಲ್ಲಿ ಯಾವುದು ಸರಿ? ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ 2021–22ನೇ ಸಾಲಿನ ಲಾಭದಲ್ಲಿ ಕಾರ್ಯದರ್ಶಿಗೆ ಪಾವತಿಸಿರುವ ಬೋನಸ್ ಹಣ ಮತ್ತು 2022–2023ನೇ ಸಾಲಿನಲ್ಲಿ ಕಾರ್ಯದರ್ಶಿಗೆ ಮತ್ತು ಕಛೇರಿ ಸಹಾಯಕಿಗೆ ಪಾವತಿಸಲು ನಿಗದಿಯಾಗಿರುವ ಬೋನಸ್ ಹಣ ಎಂದು ಉತ್ತರಿಸಿದರು.
ಸಭೆಯು ಮೇಲ್ಕಂಡ 2023–24ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿಯನ್ನು ಸರ್ವಾನುಮತದಿಂದ ಮಂಜೂರು ಮಾಡಿತು.
</td></tr>
<tr><td>10</td><td>ಸಂಘದ 2023–24ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಬಗ್ಗೆ</td><td>ಸಂಘವು ಲೆಕ್ಕ ಪರಿಶೋಧಕರನ್ನು ನೇಮಕಮಾಡಿಕೊಳ್ಳುವ ಬಗ್ಗೆ ಚರ್ಚಿಸಿ 2023–24ನೇ ಸಾಲಿನ ಲೆಕ್ಕ ಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಲು "ಸಂಗಮೇಶ ಅಸೋಸಿಯೇಟ್ ಸ್# ನಂ09,2ನೇ ಮಹಡಿ ರಾಧ ಬಿಲ್ಡಿಂಗ್ ಮಲ್ಲೇಶ್ವರಂ ಸರ್ಕಲ್,ಬೆಂಗಳೂರು–560003".ರವರನ್ನು ನೇಮಕ ಮಾಡಿಕೊಳ್ಳಲು ಸಭೆಯ ಅನುಮೋದನೆ ಕೋರಿದರು ಸಭೆಯು ತನ್ನ ಅನುಮೋದನೆ ನೀಡಿತು.</td></tr>
<tr><td>11</td><td>ಬೈಲಾ ಸಂಖ್ಯೆ 5(ಅ)ತಿದ್ದುಪಡಿ ಬಗ್ಗೆ.</td><td>
ನಿರ್ದೇಶಕರಾದ ಶ್ರೀ ಎ.ಸುರೇಶ್‌ರವರು ಬೈಲಾ ಸಂಖ್ಯೆ 5(ಅ)ತಿದ್ದುಪಡಿ ಬಗ್ಗೆ. ಕೆಳಕಂಡಂತೆ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು.
<table>
<tr><td>ಬೈಲಾ ಸಂಖ್ಯೆ</td><td>ಉಪನಿಯಮದಲ್ಲಿರುವ ಪದಗಳು</td><td>ಬೈಲಾ ಸಂಖ್ಯೆ</td><td>ತಿದ್ದುಪಡಿಯಾದ ನಂತರ</td><td>ಕಾರಣ</td></tr>
<tr><td></td><td>ಸದಸ್ಯತ್ವಕೆ ಅರ್ಹತೆಗಳು</td><td></td><td>ಸದಸ್ಯತ್ವಕೆ ಅರ್ಹತೆಗಳು</td><td></td></tr>
<tr><td>5(ಅ)</td><td>18 ವರ್ಷಕ್ಕೆ ಮೇಲ್ಪಟ್ಟ ಮತ್ತು 1872ರ ಭಾರತ ಕರಾರು ಅಧಿನಿಯಮದ(ಕೇಂದ್ರ ಅಧಿನಿಯಮದ 1872 ರ 11 ನೇ) ಪ್ರಕರಣದ ಅಡಿಯಲ್ಲಿ ಅರ್ಹರಾಗಿರುವ ಬಿ.ಎಸ್.ಎನ್.ಎಲ್., ದೂರ ಸಂಪರ್ಕ ಇಲಾಖೆ ನೌಕರರು/ ನಿವೃತ್ತರೂ ಹಾಗೂ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಗಳ ನೌಕರರು ಸದಸ್ಯತ್ವ ಹೊಂದಲು ಅರ್ಹರಾಗಿರುತ್ತಾರೆ.</td><td>5(ಅ)</td><td>18 ವರ್ಷಕ್ಕೆ ಮೇಲ್ಪಟ್ಟ ಮತ್ತು 1872ರ ಭಾರತ ಕರಾರು ಅಧಿನಿಯಮದ(ಕೇಂದ್ರ ಅಧಿನಿಯಮದ 1872 ರ 11 ನೇ) ಪ್ರಕರಣದ ಅಡಿಯಲ್ಲಿ ಅರ್ಹರಾಗಿರುವ ಬಿ.ಎಸ್.ಎನ್.ಎಲ್., ದೂರ ಸಂಪರ್ಕ ಇಲಾಖೆ ನೌಕರರು/ ನಿವೃತ್ತರೂ, ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಗಳ ನೌಕರರು ಮತ್ತು ಕಾರ್ಪೊರೇಟ್ ಸಂಸ್ಥೆಗಳ ನೌಕರರು ಸದಸ್ಯತ್ವ ಹೊಂದಲು ಅರ್ಹರಾಗಿರುತ್ತಾರೆ.</td><td>ಸಂಘದ ಧ್ಯೇಯೋದ್ದೇಶಗಳ ಪ್ರಯೋಜನ ಪಡೆಯಲು ಕಾರ್ಪೊರೇಟ್ ಸಂಸ್ಥೆಗಳ ನೌಕರರು ಅರ್ಹತೆಪಡೆಯಲು ಅನುವಾಗುವಂತೆ</td></tr>
</table>
ಸದಸ್ಯರಾದ ಶ್ರೀ ಬಿ.ಟಿ.ರಾಮಚಂದ್ರ ,ಶ್ರೀ.ಡಿ.ರತನ್ ಕುಮಾರ್ ,ಶ್ರೀ.ಶ್ರೀ.ಎನ್.ಎಸ್.ರಾವ್, ಶ್ರೀ.ಚಿಕ್ಕೇಗೌಡ, ಶ್ರೀ.ಪುಟ್ಟಯ್ಯ, ಶ್ರೀ.ಈರಪ್ಪ ಮತ್ತು ಗಣೇಶ್ ಭಟ್ ರವರು ನಮ್ಮ ಸಂಘದ ವತಿಯಿಂದ ಬೇರೆ ಕಾರ್ಪೊರೇಟ್ ಸಂಸ್ಥೆಗಳಿಗೆ ಕೊಡುವ ಅಗತ್ಯವಿರುವುದಿಲ್ಲ ,ನಮ್ಮ ಇಲಾಖೆಯ ಬಿ.ಎಸ್,ಎನ್,ಎಲ್. ನೌಕರರೇ ಬಹಳಷ್ಟು ಜನರಿದ್ದಾರೆ,ಅಲ್ಲದೆ ಸಂಘದಲ್ಲಿ ನಿವೇಶನಗಳನ್ನು ಪಡೆಯದೆ,ನಿವೇಶನಗಳಿಗಾಗಿ ಕಾಯುತ್ತಿರುವ 4ನೇ ಮತ್ತು 5ನೇ ಹಂತದ ಸದಸದ್ಯರೇ ಬಹಳಷ್ಟು ಜನರಿದ್ದಾರೆ ಹಾಗೂ ಸಂಘದಲ್ಲಿ ಷೇರು ಹಣ ಪಾವತಿಸಿ ನಿವೇಶನಗಳನ್ನು ಪಡೆಯದೇ ಇರುವ ಹಳೆಯ ಸದಸ್ಯರಿಗೆ ಅಂಚೆ ಮುಖಾಂತರ ನೋಟಿಸ್ ಕಳಿಸಿ ದಿನಾಂಕ ನಿಗದಿಪಡಿಸಿ ಹಣಪಾವತಿಸಲು ಸೂಚಿಸಿ ಅವರಿಗೆ ಮೊದಲು ನಿವೇಶನಗಳನ್ನು ಹಂಚಿಕೆ ಮಾಡಿ. ತಾವು ಯಾವ ಮಾನದಂಡದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಜನರಿಗೆ ನಿವೇಶನಗಳನ್ನು ನೀಡುತ್ತಿದಿರಿ ಮತ್ತು
</td></tr>
</table>

| | | |
|---|---|---|
| | | ಅವರಿಗು ಬಿ.ಎಸ್,ಎನ್,ಎಲ್. ನೌಕರರಿಗು ನಿವೇಶನದ ಬೆಲೆಯಲ್ಲಿ ವ್ಯತ್ಯಾಸವಿದೆಯೇ ಹಾಗೂ ಕಾರ್ಪೊರೇಟ್ ಸಂಸ್ಥೆಗೂ ಮತ್ತು ಬಿ.ಎಸ್,ಎನ್,ಎಲ್. ನೌಕರರಗು ಶೇಕಡಾವಾರು ಲೆಕ್ಕಾಚಾರ ಹೇಗೆ ನಿಗದಿಯಾಗಿದೇ?.ನಮ್ಮ ಸದಸ್ಯರಿಗೆ ವಂಚನೆಯಾಗುತ್ತದೆ ಈ ತಿದ್ದುಪಡಿಗೆ ನಮ್ಮ ಸಮ್ಮತಿ ಇರುವುದಿಲ್ಲ, ಇದು ಕೇವಲ ಸಂಘದ ಲಾಭಕ್ಕೆ ಸದಸ್ಯರ ಹಿತಕಲ್ಲ ಎಂದು ತಿಳಿಸಿದರು.<br><br>ಸದಸ್ಯರಾದ ಶ್ರೀ .ಎಮ್.ಎನ್,ರಾಮಕೃಷ್ಣ ರವರು ಸಭೆಯನ್ನು ಉದ್ದೇಶಿಸಿ ಆತ್ಮೀಯ ಸದಸ್ಯರ ಗಮನಕ್ಕೆ,ಸಂಘವು ಸ್ಥಾಪಿತಗೊಂಡು 52ವರ್ಷಗಳೇ ಕಳೆದಿವೆ ಸಂಘವು ನಿಂತ ನೀರಿನಂತಿರದೆ ಅದನ್ನು ಸವೃದ್ಧಿಯಾಗಿ ಮತ್ತು ಆರೋಗ್ಯಕರವಾಗಿ ಪೋಷಿಸಲು ಉತ್ತೇಜನ ನೀಡುವುದು ನಮ್ಮೆಲ್ಲರ ಕರ್ತವ್ಯ,ಸಂಘದ ಪ್ರಗತಿಯ ದೃಷ್ಟಿಯಿಂದ ಇದು ಬಹಳ ಒಳ್ಳೆಯ ನಿರ್ಧಾರ ಬೈಲಾ ಸಂಖ್ಯೆ 5(ಅ)ತಿದ್ದುಪಡಿಗೆ ನನಗೆ ಸಂಪೂರ್ಣ ಒಪ್ಪಿಗೆ ಇದೆ ಎಂದು ತಿಳಿಸಿದರು.<br><br>ಸದಸ್ಯರಾದ ಶ್ರೀ ಹೊನ್ನಗಿರಿಯವರು ಸಂಘವು ನನಗೆ ಬಹಳ ಒಳ್ಳೆಯ ನಿವೇಶನವನ್ನು ನೀಡಿ ನೊಂದಣೆಯನ್ನು ಮಾಡಿಕೊಟ್ಟಿದೆ ನನಗೆ ಬಹಳ ಸಂತೋಷವಾಗಿದೆ ಅಧ್ಯಕ್ಷರೆ ನಿಮಗೂ ಮತ್ತು ಸಂಘಕ್ಕೂ ಕೃತಜ್ಞತೆಗಳು, ತಾವು ಈ ಬೈಲಾ ಸಂಖ್ಯೆ 5(ಅ)ತಿದ್ದುಪಡಿ ಮಾಡುತ್ತಿರುವುದು ಬಹಳ ಒಳ್ಳೆಯ ಕೆಲಸ ನನಗೆ ಸಂಪೂರ್ಣ ಒಪ್ಪಿಗೆ ಇದೆ. ತಾವು ನನ್ನ ನಿವೇಶನದ ತಡೆಗೋಡೆಯನ್ನು ಹಾಕುವುದು ಬಾಕಿಯಿದೆ ದಯಮಾಡಿ ಹಾಕಿಸಿ ಕೊಡಿ ಎಂದು ವಿನಂತಿಸುತ್ತೇನೆ.<br><br>ಸದಸ್ಯರಾದ ಶ್ರೀ ರಾಚಯ್ಯನವರು ಮೊದಲ ಆದ್ಯತೆಯನ್ನು ಬಿ.ಎಸ್,ಎನ್,ಎಲ್. ನೌಕರರಿಗೆ ಕೊಡಿ ಶೇಕಡ 85% ರಷ್ಟು ಬಿ.ಎಸ್,ಎನ್,ಎಲ್. ನೌಕರರಿಗೆ ಹಾಗೂ ಕಾರ್ಪೊರೇಟ್ ಸಂಸ್ಥೆಗೆ ಶೇಕಡ 15% ರಷ್ಟು ಎಂದು ನಿಗದಿಪಡಿಸಿ ಬೈಲಾ ಸಂಖ್ಯೆ 5(ಅ)ತಿದ್ದುಪಡಿಸಿ ಹಾಗೂ 7ನೇ ಹಂತವನ್ನು ಪ್ರಾರಂಭಿಸಬಹುದು ಇದಕ್ಕೆ ನಮ್ಮ ಒಪ್ಪಿಗೆ ಇದೆ ಎಂದು ತಿಳಿಸಿದರು.<br><br>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ಬೈಲಾ ಸಂಖ್ಯೆ 5(ಅ)ತಿದ್ದುಪಡಿಸಿ 7ನೇ ಹಂತವನ್ನು ಪ್ರಾರಂಭಿಸುತ್ತಿರುವುದು ಸದಸ್ಯರ ಮತ್ತು ಸಂಘದ ಅಭಿವೃದ್ಧಿಗಾಗಿ ಅಷ್ಟೇ .ಸಂಘದ ಮೊದಲ ಆದ್ಯತೆ ಬಿ.ಎಸ್,ಎನ್,ಎಲ್. ನೌಕರರಿಗೆ ನಮ್ಮ ಸದಸ್ಯರ ನಂತರ ಇತರೆ ಸದಸ್ಯರಿಗೆ ನಿಗದಿಪಡಿಸಲಾಗುವುದು ಎಂದು ತಿಳಿಸಿದರು.<br><br>ಬೈಲಾ ಸಂಖ್ಯೆ 5(ಅ)ತಿದ್ದುಪಡಿಗೆ ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿತು. |
| 12 | 1) ಸಂಘದ ಲೆಕ್ಕ ತಃಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ 1ನೇ ಮತ್ತು 2ನೇ ಹಂತದ ನಿವೇಶನ ಲೆಕ್ಕ ಹೊಂದಾಣಿಕೆಯಾಗಿದ್ದು 1ನೇ ಮತ್ತು 2ನೇ ಹಂತದಿಂದ ಬರತಕ್ಕ ಬಾಕಿಗಳು ಯಾವುದು ಇಲ್ಲದ ಕಾರಣ ಲೆಕ್ಕ ತಃಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ 1ನೇ ಮತ್ತು 2ನೇ ಹಂತದ ನಿವೇಶನ ಲೆಕ್ಕಗಳನ್ನು ಕೈಬಿಡಲು ಮಹಾಸಭೆಯ ಅನುಮೋದನೆ ಕೋರುವ ಬಗ್ಗೆ. | ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಂಘದ ಲೆಕ್ಕ ತಃಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ 1ನೇ ಮತ್ತು 2ನೇ ಹಂತದ ನಿವೇಶನ ಲೆಕ್ಕ ಹೊಂದಾಣಿಕೆಯಾಗಿದ್ದು 1ನೇ ಮತ್ತು 2ನೇ ಹಂತದಿಂದ ಬರತಕ್ಕ ಬಾಕಿಗಳು ಯಾವುದು ಇಲ್ಲದ ಕಾರಣ ಲೆಕ್ಕ ತಃಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ 1ನೇ ಮತ್ತು 2ನೇ ಹಂತದ ನಿವೇಶನ ಲೆಕ್ಕಗಳನ್ನು ಕೈಬಿಡಲು ಮತ್ತು ಮಹಾಸಭೆಯ ಅನುಮೋದನೆ ಕೋರುವ ಬಗ್ಗೆ. ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು.<br><br>ಲೆಕ್ಕ ತಃಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ 1ನೇ ಮತ್ತು 2ನೇ ಹಂತದ ನಿವೇಶನ ಲೆಕ್ಕಗಳನ್ನು ಕೈಬಿಡಲು ಮಹಾಸಭೆಯ ಅನುಮೋದನೆ ಕೋರುವ ಬಗ್ಗೆ. ಸಭೆಯು ತನ್ನ ಅನುಮೋದನೆ ನೀಡಿತು. |
| 13 | ಇತರೆ ವಿಷಯಗಳಿದ್ದಲ್ಲಿ | (ಅ). ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಭೆಗೆ 4ನೇ ಮತ್ತು 5ನೇ ಹಂತಕ್ಕೆ |

| | | |
|---|---|---|
| | ಅಧ್ಯಕ್ಷರ ಅನುಮತಿ ಮೇರೆಗೆ | ಸಂಬಂಧಿಸಿದಂತೆ ಮಾಹಿತಿಯನ್ನು ವಿವರಿಸುತ್ತೇನೆ ನಂತರ ಸದಸ್ಯರಿಗೆ ಈ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಕೇಳಿ ಉತ್ತರ ಪಡೆಯಬಹುದು ಎಂದು ತಿಳಿಸಿ ಕೆಳಕಂಡ ಮಾಹಿತಿಯನ್ನು ನೀಡಿದರು.<br><br>➢ <u>ಯೋಜಿತ 4ನೇ ಹಂತ:</u><br>ಸಂಘವು ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸರ್ವೆ ನಂಬರ್ **191, 193/5, 184, 186, 188, 190, 195, 3/2, 191/2 ,191/8** ರಲ್ಲಿ ಒಟ್ಟು **28** ಎಕರೆ **30.5** ಗುಂಟೆ ಹಾಗೂ ಸರ್ವೆ ನಂ **3/2,191/2,191/8** ರ **3** ಎಕರೆ **39** ಗುಂಟೆ ಜಮೀನುಗಳಲ್ಲಿ ಅಭಿವೃದ್ದಿಪಡಿಸಿರುವ ವಸತಿ ಬಡಾವಣೆ ನಿವೇಶನಗಳನ್ನು ಸದಸ್ಯರುಗಳಿಗೆ ಮಂಜೂರಾದ ನಕ್ಷೆಯಂತೆ ವಿವಿಧ ಅಳತೆಯ ಒಟ್ಟು **430** ನಿವೇಶನಗಳನ್ನು ಅಭಿವೃದ್ಧಿ ಪಡಿಸಿ, ಇವುಗಳನ್ನು ಸದಸ್ಯರಿಗೆ ಜೇಷ್ಠತೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ.<br><br>ಬಡಾವಣೆಯಲ್ಲಿ ಲಭ್ಯವಿರುವ ಒಟ್ಟು **430** ನಿವೇಶನಗಳ ಪೈಕಿ **430** ನಿವೇಶನಗಳು ಪ್ರಾಧಿಕಾರದಿಂದ ಶೇಕಡ **100%** ರಷ್ಟು ಬಿಡುಗಡೆಗೊಂಡಿದ್ದು, ನಿವೇಶನಗಳ ನೋಂದಣೆ ಪ್ರಕ್ರಿಯೆ ಮುಕ್ತಾಯ ಹಂತದಲ್ಲಿರುತ್ತದೆ.<br><br>➢ <u>ಯೋಜಿತ 5ನೇ ಹಂತ:</u><br>ಉದ್ದೇಶಿಸಲಾಗಿರುವ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ವಾಜಮಂಗಲ ಗ್ರಾಮದಲ್ಲಿ ಸರ್ವೆ ನಂ: **34/1**ಎ, **34/1**ಬಿ, **34/2, 34/3, 34/4, 34/4**ಎ, **34/5**ಬಿ, **34/8**ಎ, **34/9, 192/2, 192/3, 193/3, 193/4, 193/5, 193/6, 194/1**ಬಿ, **194/1**ಎ**2, 213/3, 194/1**ಎ**1, 200/1, 200/2, 200/3, 200/6, 206/1**ಎ**1, 206/3, 213/1, 214/3, 216, 217/1, 217/2, 217/3**ರಲ್ಲಿ ಸುಮಾರು **49** ಎಕರೆ **39** ಗುಂಟೆ ಜಮೀನಿನ ಪೈಕಿ **39**ಎಕರೆ **35.5**ಗುಂಟೆ ಜಮೀನಿನನ್ನು ನಕ್ಷೆ ಅನುಮೋದನೆಗೊಂಡಿದ್ದು ನಕ್ಷೆ ಬಿಡುಗಡೆ ಆದೇಶ ಸಂಖ್ಯೆ:-ಮೈ. ನ. ಪ್ರಾ: ನ ಯೋ ಶಾ: ವಿನ್ಯಾಸ: **55: 2021-22**, ದಿನಾಂಕ:**7-8-2021** ರಂದು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರವರಿಂದ ವಸತಿ ವಿನ್ಯಾಸ ನಕ್ಷೆಯ ಅನುಮತಿ ಆದೇಶ ಬಿಡುಗಡೆಯಾಗಿರುತ್ತದೆ.<br><br>ಬಡಾವಣೆಯಲ್ಲಿ ಸಿವಿಲ್ ಕಾಮಗಾರಿಗಳು ,ಒಳಚರಂಡಿ ,ನೀರು,ಉದ್ಯಾನವನ, ಸಿ.ಎ.ನಿವೇಶನ, ರಸ್ತೆ ,ವಿದ್ಯುತ್ ಈ ಕಾಮಗಾರಿಗಳು ಶೇಕಡ **80%** ರಷ್ಟು ಮುಗಿದಿದ್ದು ಉಳಿದ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತದೆ. ಎಲ್ಲಾ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ಸಿ.ಡಿ. ಬಿಡುಗಡೆ ನಂತರ ಸದಸ್ಯರಿಗೆ ನೋಂದಣಿ ಮಾಡಿಕೊಡಲು ಕ್ರಮವಿಡಲಾಗುವುದು.<br><br>ವಾಜಮಂಗಲ ಗ್ರಾಮದ ಸರ್ವೆ ನಂಬರ್ **139/1, 141/3,142/3, 183/4,183/5,183/6,183/7,183/9 & 194/3** ರಲ್ಲಿ ಒಟ್ಟು **8**ಎಕರೆ **12.5** ಗುಂಟೆ ಜಮೀನುಗಳು ಭೂಪರಿವರ್ತನೆಗೊಂಡಿದ್ದು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೊಂಡಿರುತ್ತಾದೆ. ಹಾಗೂ ಮುಂದಿನ ಕಾಮಗಾರಿಗಳಿಗಾಗಿ ಕ್ರಮವಿಡಲಾಗುವುದು.ಕಾಮಗಾರಿಗಳು ಪೂರ್ಣಗೊಂಡ ಮೇಲೆ ಬಾಕಿ ಉಳಿದ ಸದಸ್ಯರಿಗೆ ಅನುಮೋದನೆಗೊಂಡ ನಕ್ಷೆಯಲ್ಲಿ ಲಭ್ಯವಿರುವ ಅಳತೆಗಳಿಗೆ ಅನುಗುಣವಾಗಿ ನಿವೇಶವಗಳನ್ನು ಹಂಚಿಕ್ಕೆ ಮಾಡಲಾಗುವುದು ಎಂದು ತಿಳಿಸಿದರು.<br><br>ಸದಸ್ಯರಾದ ಶ್ರೀ.ಕೃಷ್ಣೇಗೌಡ, ಶ್ರೀ. ಹನುಮಂತರಾಯಪ್ಪನವರು ನಾವು ನಿವೇಶನಕ್ಕೆ ಬೇಕಾದ ಹಣವನ್ನು ಪಾವತಿಸಿ ನಿವೇಶನಕಾಗಿ ಕಾಯುತ್ತಿದ್ದೇವೆ ಆದರೆ ನೀವು **4**ನೇ ಹಂತದಲ್ಲಿ ಹಣವನ್ನು ಪಾವತಿಸಿದ ಎಲ್ಲಾ ಸದಸ್ಯರಿಗು ನಿವೇಶನವನ್ನು ಹಂಚಿಕೆಮಾಡಲಾಗಿದೆ |

| | | |
|---|---|---|
| | | ಎಂದು ತಿಳಿಸಿದಿರಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.<br><br>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ನಿವೇಶನಕ್ಕೆ ಹಣ ಪಾವತಿಸಿರುವ 4ನೇ ಮತ್ತು 5ನೇ ಸದಸ್ಯರಿಗೆ ಸಂಘವು ದಿನಾಂಕ ನಿಗದಿಪಡಿಸಿ ನಿವೇಶನಗಳನ್ನು ಸದಸ್ಯರ ಜೇಷ್ಠತೆಗೆ ಅನುಗುಣವಾಗಿ ಮತ್ತು ಅನುಮೋದನೆಗೊಂಡ ನಕ್ಷೆಯಲ್ಲಿ ಲಭ್ಯವಿರುವ ಅಳತೆಗಳಿಗೆ ಅನುಗುಣವಾಗಿ ಹಂಚಿಕೆಮಾಡಲಾಗಿದೆ .ನಿವೇಶನ ಹಂಚಿಕೆ ಸಮಾರಂಭಕ್ಕೆ ಬಾರದಿರುವ ಸದಸದ್ಯರಿಗೆ ಸಂಘವೇ ಅವರು ಜೇಷ್ಠತೆ ಮತ್ತು ಲಭ್ಯವಿರುವ ನಿವೇಶನದ ಆಳತೆಗೆ ಅನುಗುಣವಾಗಿ ಹಂಚಿಕೆ ಮಾಡಲಾಗಿದೆ, ತಾವು ಸಂಘಕ್ಕೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದರು.<br><br>ಸದಸ್ಯರಾದ ಶ್ರೀಮತಿ.ಎಮ್.ಆರ್.ಗಾಯತ್ರಿ, ಶ್ರೀಮತಿ.ಸನುಸೂಯ, ಶ್ರೀಮತಿ.ಹೇಮಲತಾ, ಶ್ರೀಮತಿ.ಮಹೇಶ್ವರಿಯವರು ನಾವು ಸಂಘಕ್ಕೆ ಅಪೂರ್ಣ ನಿವೇಶನ ಮುಂಗಡವನ್ನು ಪಾವತಿಸಿದ್ದೇವೆ, ನಾವು ಈಗ ಹಣ ಪಾವತಿಸಲು ತಯಾರಿದ್ದೇವೆ ಮತ್ತು ನಾವು 40 x 60, ಮತ್ತು 50 x 80 ಆಳತೆಗೆ ಹಣ ಪಾವತಿಸಿದು, ನಮಗೆ 40 x 60, ಮತ್ತು 50 x 80 ಆಳತೆಯ ನಿವೇಶನಗಳೇ ನೀಡುತ್ತೀರಾ ಎಂದು ಪ್ರಶ್ನಿಸಿದರು.<br><br>ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ 8ಎಕರೆ 12.5 ಗುಂಟೆ ಜಮೀನುಗಳು ಭೂಪರಿವರ್ತನೆಗೊಂಡಿದ್ದು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೊಂಡಿರುತ್ತಾದೆ.ಅಪೂರ್ಣ ನಿವೇಶನ ಮುಂಗಡವನ್ನು ಪಾವತಿಸಿರುವ ಸದಸದ್ಯರಿಗೆ ಅನುಮೋದನೆಗೊಂಡ ನಕ್ಷೆಯಲ್ಲಿ ಲಭ್ಯವಿರುವ ಅಳತೆಗಳಿಗೆ ಅನುಗುಣವಾಗಿ ಹಂಚಿಕೆಮಾಡಲಾಗುವುದು, 40 x 60, ಮತ್ತು 50 x 80 ಆಳತೆಯ ನಿವೇಶನಗಳು ಇರುವ ಸಾಧ್ಯತೆಗಳೇ ಬಹಳ ಕಡಿಮೆ ಅದ ಕಾರಣ ಬಾಕಿ ಉಳಿದ ಸದಸ್ಯರಿಗೆ ಪ್ರತ್ಯೇಕ ಸಭೆ ಕರೆದು ನಿವೇಶನ ದರ ಮತ್ತು ಅಳತೆಗಳ ಬಗ್ಗೆ ಚರ್ಚಿಸಿಲಾಗುವುದ್ದು ಎಂದು ತಿಳಿಸಿದರು.<br><br>(ಆ) . ಸದಸ್ಯರಾದ ಶ್ರೀ.ಪಿ.ದೇವರಾಜುರವರು ನಿಯಮ 30(ಬಿ) ಉಲ್ಲಂಘನೆ ಆಗಿರುವ ಬಗ್ಗೆ ಸಂಘಕ್ಕೆ ಮಾಹಿತಿ ಕೊರಿ ಬರೆದಿರುವ ಪತ್ರದ ಬಗ್ಗೆ.<br><br>ಸಭಾಧ್ಯಕ್ಷರು ಸಭೆಯಲ್ಲಿ ಓದಿ ಕೆಳಕಂಡಂತೆ ಉತ್ತರಿಸಿದರು.<br><br>ನಮ್ಮ ಸಂಘವು ಇಲ್ಲಿಯವರೆಗು 6 ವಸತಿ ಬಡಾವಣೆಯನ್ನು ನಿರ್ಮಿಸಿ ಸದಸ್ಯರಿಗೆ ನಿಯಮದ ಅನುಸಾರ ವಿತರಿಸಲಾಗಿದೆ.1ನೇ ಹಂತ ಬೋಗಾಧಿಯಲ್ಲಿ 82ನಿವೇಶನಗಳಲ್ಲಿ 14 ಜನ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ.2ನೇ ಹಂತ ಬೋಗಾಧಿಯಲ್ಲಿ 224 ನಿವೇಶನಗಳಲ್ಲಿ 38 ಜನ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ.3ನೇ ಹಂತ ಹಂಚ್ಯಾಯಲ್ಲಿ 513 ನಿವೇಶನಗಳಲ್ಲಿ 92 ಜನ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ. 4ನೇ ಹಂತ ವಾಜಮಂಗಲಯಲ್ಲಿ 430 ನಿವೇಶನಗಳಲ್ಲಿ 97 ಜನ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ.5ನೇ ಹಂತ ವಾಜಮಂಗಲಯಲ್ಲಿ 543 ನಿವೇಶನಗಳಲ್ಲಿ 51 ಜನ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲು ನಿಸದಿಯಾಗಿದು 5ನೇ ಹಂತದಲ್ಲಿ ಇದುವರೇಗು ನಿವೇಶನ ಮುಂಗಡ ಪಾವತಿಸಿರುವ ಎಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸದಸ್ಯರಿಗೆ ಹಂಚಿಕೆ ಮಾಡಲಾಗಿದು, ಮುಂದಿನ ದಿನಗಳಲ್ಲಿ ಉಳಿಕೆ ಸದಸ್ಯರಿಗೆ ಹಂಚಿಕೆಮಾಡಲಾಗುವುದು. 6ನೇ ಹಂತದ ಕೆಲ್ಲಹಳ್ಳಿಯಲ್ಲಿ 51 ನಿವೇಶನಗಳಲ್ಲಿ ಹೆಚ್ಚುವರಿ ಜನ ಪರಿಶಿಷ್ಟ ಜಾತಿ ಪರಿಶಿಷ್ಟ |

| | | |
|---|---|---|
| | | ಪಂಗಡದ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ. ಸಂಘವು ನಿಯಮ 30(ಬಿ) ಉಲ್ಲಂಘನೆ ಆಗಿರುರಿವುದಿಲ್ಲ ಎಂದು ಸ್ಪಷ್ಟಪಡಿಸುತ್ತಿದೆನೆ ಮತ್ತು ಸಂಘವು ಸಹಕಾರ ಸಂಘಗಳ ನೀತಿ ನಿಯಮಗಳನ್ನು ಕ್ರಮಬದ್ಧವಾಗಿ ಪಾಲಿಸುತ್ತಾ ಬಂದಿರುತ್ತದೆ ಎಂದು ತಿಳಿಸಿದರು.<br><br>ಸದಸ್ಯರಾದ ಶ್ರೀ .ಎಮ್.ಎನ್,ರಾಮಕೃಷ್ಣ ರವರು ಮಾನ್ಯ ಅಧ್ಯಕ್ಷರೇ ಸಭೆಯಲ್ಲಿ ಒಬ್ಬರೇ ಒಂದೇ ನಿಷಯದ ಬಗ್ಗೆ ಚರ್ಚಿಸಸಲು ಸಮಯ ವ್ಯಯ ಮಾಡಿದರೆ,ಬೇರೆ ಸದಸ್ಯರಿಗೆ ತಮ್ಮಗೆ ಬೇಕಾದ ಮಾಹಿತಿ ಪಡೆಯಲು ಮತ್ತು ಇತರೆ ವಿಷಯದ ಬಗ್ಗೆ ಚರ್ಚಿಸಲು ಸಮಯ ಮತ್ತು ಅವಕಾಶ ಎರಡೂ ಇರುವುದಿಲ್ಲ ಇದನ್ನು ಗಮನಿಸಿ ಮಹಾ ಸಭೆಗಳಲ್ಲಿ ಆಯಾ ವಿಷಯಗಳಿಗೆ ಕಾಲಮಿತಿ ನಿಗದಿಪಡಿಸಿ ಚರ್ಚಿಸುವಂತೆ ಮುಂಬರುವ ಸಭೆಗಳಲ್ಲಿ ಕಾಲಮಿತಿ ನಿಗದಿಪಡಿಸಿ ಎಂದು ಸಲಹೆ ನೀಡಿದರು.<br><br>ಆಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸದಸ್ಯರಾದ ಶ್ರೀ .ಎಮ್.ಎನ್,ರಾಮಕೃಷ್ಣ ರವರಸಲಹೆಗೆ ಮುಂದಿನ ದಿನಗಳಲ್ಲಿ ಈ ಸಲಹೆಯನ್ನು ಜಾರಿಗೊಳಿಳಾಗುವುದು ಎಂದುತಿಳಸಿದರು |
| 14 | ವಂದನಾರ್ಪಣೆ | ಸಂಘದ ಆಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಭೆಯು ಯಶಸ್ವಿಯಾಗಿ ನಡೆಯಲು ಸಭೆಗೆ ಹಾಜರಾಗಿ ಸಹಕರಿಸಿದ ಸದಸ್ಯರುಗಳಿಗೆ ಹಾಗೂ ನಮ್ಮ ಸಂಘದ ಜೊತೆಯಲ್ಲಿ ಹಲವು ವರ್ಷಗಳಿಂದ ವಸತಿ ನಿವೇಶನಗಳನ್ನು ನಿರ್ಮಿಸಿ ಸದಸ್ಯರಿಗೆ ಹಂಚಿಕೆ ಮಾಡಲು ಸಹಕರಿಸಿರುವ ಗುತ್ತಿಗೆದಾರರಾದ ಮೇ॥ ಸ್ಕಿಲ್‌ಟೆಕ್ ಗುತ್ತಿಗೆದಾರರಿಗೆ ಮತ್ತು ಗ್ರಾವಿಟಿ 9 ಗುತ್ತಿದಾರರಿಗೆ ಹಾಗೂ ಪೋಲೀಸ್ ಸಿಬ್ಬಂದಿಯವರಿಗು ಮತ್ತು "ಶ್ರೀ ನಟರಾಜ ಪ್ರಾರ್ಥನಾ ಮಂದಿರ" ಸಭಾ ಭವನದ ಸಂಸ್ಥೆಗೂ ಸಂಘದ ಆಡಳಿತ ಮಂಡಳಿ ಪರವಾಗಿ ವಂದನೆಗಳನ್ನು ಅರ್ಪಿಸಿದರು. |

2022–23ನೇ ಸಾಲಿನ ಮಹಾಸಭೆಯ ಕಾರ್ಯ–ಕಲಾಪಗಳು ಮುಕ್ತಾಯಗೊಂಡವು.

ಸಹಿ.

(ಅಂಜಲಿ ಎ.ಡಿ.)
ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ

"ಯಥಾ ನಕಲು"

ಸಹಿ.

(ಎನ್.ಡಿ.ಸುಂದರ್)
ಅಧ್ಯಕ್ಷರು